ಟ್ಟು ವಾಯಿದೆಯಲ್ಲಿ ಮೇಲ್ಪಟ್ಟ ಅಧಿಕಾರಿಗಳಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಬರುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು :—

ತಾಲ್ಲೂಕು.	ಹೋಬಳಿ.	ಗ್ರಾಮ	ಬಾಕಿದಾರರ ಹೆಸರು.	ಸ್ವತ್ತಿನ ತಪ್ಪೀಲ್. ಕಟ್ಟಡಗಳು. ಸ್ವತ್ತಿನ ಹೆಸರು	ಅಂದಾಜು ಕಿಮ್ಮತ್ತು.	ಜಮೀನು. ಖುಷ್ಕಿ, ತರಿ ಅಥವಾ ಬಾಗಾಯತು	ಸರ್ವೆ ನಂಬರ್ ಅಥವಾ ಪೈಮಾಸಿನ ಹೆಸರು	ಎಷ್ಟು.	ಅಕಾರ.	ಅಂದಾಜು ಕಿಮ್ಮತ್ತು.	ಸರ್ಕಾರಕ್ಕೆ ಸಲಿಯಬೇಕಾದ ಬಾಕಿ ಜೋಡಿ ಸೊಲಗು.	ಸರ್ಕಾರಕ್ಕೆ ಬರಬೇಕಾದ ನೋಟೀಸ್ ಫೀ ಹರಾಜ್ ಫೀ ಸಹಿತವಾದ ಬಾಕಿ ಸೊಲಗು.
								ಎ. ಗು.	ರೂ. ಆ. ಪೈ.			ರೂ. ಆ. ಪೈ.
ನೆಲಮಂಗಲ	ದಾಸನಪುರ	ಜೋಡಿ ಕಂಸಂದ್ರ	ರಾಮಸ್ವಾಮಿ ಅಯ್ಯಂಗಾರ್ರು	ಸ್ವರಾಗ್ರಾನು	...							
							ಪರಂಪೋಕು ...	89 24	11 0 0			114 6 2 ಬಾಕಿ
							ಖುಷ್ಕಿ ...	469 32	315 1 6			0 8 0 ನೋಟೀಸ್
							ತರಿ ...	6 23	28 1 9			0 8 0 ಹರಾಜ್ ಫೀ
							ಬಾಗಾಯತ್ತು ...	0 5	0 4 0			115 6 2 ಮತ್ತು ಬಡ್ಡಿ ಸಹ ಬರಬೇಕು.
							ಜಮ್ಮಾ ...	566 4	354 7 3			
							ಗ್ರಾಮದ ಅಂದಾಜು ...		600 0 0			
							ಇದರಲ್ಲಿ ಕಟ್ಟಡಗಳ ಅಂದಾಜು ...		263 0 0			
									863 0 0	ರೂ. 863	ರೂ. ಆ. ಪೈ. 115 7 2	

ಟಿ. ರಾಯಲು ಚೆಟ್ಟಿ, ಫಾರ್ ಡೆಪ್ಯೂಟಿ ಕಮಿಷನರ್.

ಕೋಲಾರ ಡಿಸ್ಟ್ರಿಕ್ಟು.

ಇನ್ಸಿಹಾರ್ಮೆ.

ಚಿಕ್ಕಬಳ್ಳಾಪುರ ತಾಲ್ಲೂಕು ಕಸಬಾ ಹೋಬಳಿಗೆ ಸೇರಿದ ಜೋಡಿ ಜಡ್ಡಿವೆಂಕಟಹಳ್ಳಿ ಗ್ರಾಮವು ಸರ್ಕಾರಕ್ಕೆ ಬರಬೇಕಾದ ಬಾಕಿಗೋಸ್ಕರವಾಗಿ ಚಿಕ್ಕಬಳ್ಳಾಪುರ ತಾಲ್ಲೂಕು ಕಛೇರಿಯಲ್ಲಿ ಚಿಕ್ಕಬಳ್ಳಾಪುರ ಸಬ್ ಡಿವಿಜ್ಞ್ ಸಾಹೇಬರವರ ರೂಬರೂಬು 1909ನೆ ಇಸವಿ ಡಿಸೆಂಬರು 13ನೆ ತಾರೀಖು ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

ಹೆಚ್ಚಿನ ತಪಶೀಲ್ ಬಗ್ಗೆ 1909ನೆ ಇಸವಿ ನವಂಬರ್ 18ನೆ ಮಕ್ರುಂ ಮೈಸೂರು ಗೆಜೆಟ್ಟಿನ 2ನೆ ಭಾಗದ 863ನೆ ನಂಬರ್ ಪೇಜು ನೋಡತಕ್ಕದ್ದು.

ತಾರೀಖು 17ನೆ ನವಂಬರ್ 1909.

ಚಿಕ್ಕಬಳ್ಳಾಪುರ ತಾಲ್ಲೂಕು ಮಂಡಿಕಲ್ಲು ಹೋಬಳಿಗೆ ಸೇರಿದ ಕಾಯಂಗುತ್ತಾ ಚೀಗಾನಹಳ್ಳಿ ಗ್ರಾಮವು ಸರ್ಕಾರಕ್ಕೆ ಬರಬೇಕಾದ ಬಾಕಿಗೋಸ್ಕರವಾಗಿ ಚಿಕ್ಕಬಳ್ಳಾಪುರ ತಾಲ್ಲೂಕು ಕಛೇರಿಯಲ್ಲಿ ಚಿಕ್ಕಬಳ್ಳಾಪುರ ಸಬ್ ಡಿವಿಜ್ಞ್ ಆಫಿಸರವರ ರೂಬರೂಬು 1909ನೆ ಡಿಸೆಂಬರ್ ಮಾಹೆ 20ನೆ ತಾರೀಖು ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

ಹೆಚ್ಚಿನ ತಪಶೀಲ್ ಬಗ್ಗೆ 1909ನೆ ಇಸವಿ ನವಂಬರ್ 25ನೆ ಮಕ್ರುಂ ಮೈಸೂರು ಗೆಜೆಟ್ಟಿನ 2ನೆ ಭಾಗದ 869-870ನೆ ಪೇಜುಗಳನ್ನು ನೋಡತಕ್ಕದ್ದು.

ಎ. ವೇದಾಂತದೇಶಿಕಂ ಐಯ್ಯಂಗಾರ್, ಫಾರ್ ಡೆಪ್ಯೂಟಿ ಕಮಿಷನರ್.

ಬೆಂಗಳೂರು ಸಬ್ ಜಡ್ಜಿಯವರ ಕೋರ್ಟಿನಲ್ಲಿ.

ಸ್ರ 1909-10ನೆ ಇಸವಿ ಮಿ॥ ಅರ್ಜೀ ನಂಬರ್ 281.

ಬೆಂಗಳೂರಲ್ಲಿ ಬಹಳವಾಗಿ ವ್ಯಾಪಾರ ಮಾಡುತ್ತಿದ್ದು ತಿರುಜನಾಪಲ್ಲೀಲಿ ಮೃತಪಟ್ಟ ಕೊಮಾರಸ್ವಾಮಿ ನಾಯಿಡು ಆಸ್ತೀ ವಿಷಯದಲ್ಲಿ—

ಅರ್ಜೀದಾರು ಲಕ್ಷ್ಮೀನಾರಾಯಣಸ್ವಾಮಿನಾಯಿಡು ವಗೈರೇರು ಮೃತಪಟ್ಟ ಸದರಿ ಕೊಮಾರಸ್ವಾಮಿ ನಾಯಿಡುಯವರಿಗೆ ಮುಖ್ಯವಾರಸ್ದಾರು ಆಗಬೇಕೆಂಬ ಹಕ್ಕುದಾರಿಮೇಲೆ ಬೆಂಗಳೂರು ಸ್ಥಳದ ವಾಸಸ್ಥರಾಗಿ ಮೃತಪಟ್ಟ ಕೊಮಾರಸ್ವಾಮಿ ನಾಯಿಡರಜೆಂದಗಿ ಬರ್ಯಾಗಿ ಬರತಕ್ಕ ರೂಪಾಯಿ (1,930—8—0 ಸಾಲವನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಗೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಿದ 1ನೆ ಲಕ್ಷ್ಮೀನಾರಾಯಣಸ್ವಾಮಿ ನಾಯಿಡು, 2ನೆ ವೀರರಾಘವಲು ನಾಯಿಡು, 3ನೆ ಗೋವಿಂದರಾಜುಲು ನಾಯಿಡು 2-3ನೆ ಮೈನರ್, ಗಾರ್ಡಿಯರ್ 1ನೆ ಅರ್ಜೀದಾರ್ರ ಅರ್ಜಿಯನ್ನು ಸ್ರ 1909ನೆ ಇಸವಿ ಡಿಸೆಂಬರು ತಿಂಗ

ಳು ತಾರೀಖು ಕರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತ ಪಟ್ಟ ಕೊಮಾರಸ್ವಾಮಿ ನಾಯಿಡರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ ಸ 1909ನೆ ಇಸವಿ ನವಂಬರ್ ತಿಂಗಳು 20ನೆ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಶಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸ್ ಸ 1909-10ನೆ ಇಸವಿ ಮಿಸ್ ಅರ್ಜೀ ನಂಬರ್ 290.

ನೆಲವಂಗಲದಲ್ಲಿದ್ದ ಮೃತಪಟ್ಟ ರಾಮೈಯ್ಯ ಕೆಟ್ಟರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಸಾವಿತ್ರಮ್ಮ ಮೈನರ್, ಗಾರ್ಡಿಯರ್ ಮುನಿಯಪ್ಪಕೆಟ್ಟಿ, ಮೃತಪಟ್ಟ ಸದರೀ ರಾಮೈಯ್ಯ ಕೆಟ್ಟರಿಗೆ ಮುಖ್ಯ ವಾರಸುದಾರರು ಆಗಬೇಕೆಂಬ ಹಕ್ಕುದಾರಿಕೇಲೆ ನೆಲವಂಗಲದ ವಾಸಸ್ಥರಾಗಿ ಮೃತಪಟ್ಟ ರಾಮೈಯ್ಯ ಕೆಟ್ಟರ ಜಿಂದಗಿ ಬಗ್ಯಾಗಿ ಬರ ತಕ್ಕ ರೂಪಾಯಿ 1,446—10—6 ಸಾಲವನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿವ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಮೇಲ್ಕಂಡವರ ಅರ್ಜಿಯನ್ನು ಸ್ ಸ 1909ನೆ ಇಸವಿ ಡಿಸೆಂಬರು ತಿಂಗಳು ತಾರೀಖು 10ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ರಾಮೈಯ್ಯ ಕೆಟ್ಟರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ ಸ 1909ನೆ ಇಸವಿ ನವಂಬರು ತಿಂಗಳು 29ನೆ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

1909—10ನೆ ಇಸವಿ ಮಿ|| ಅರ್ಜೀ ನಂಬರ್ 304.

ಹೂನೆಯಲ್ಲಿ ಮೃತಪಟ್ಟ ಕರಿಗಿರಿಯಾಚಾರ್ಯರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು 1ನೆ ನರಸಿಹ್ಮಾಚಾರ್, 2ನೆ ಆನಂದತೀರ್ಥ ಮೈನರ್, ಗಾರ್ಡಿಯರ್ ನರಶಿಂಗರಾವ್, ಮೃತಪಟ್ಟ ಸದರೀ ಕರಿ ಗಿರಿಯಾಚಾರ್ರಿಗೆ ಮುಖ್ಯವಾರಸ್‌ದಾರು ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರು ಸ್ಥಳದ ವಾಸಸ್ಥರಾಗಿ ಮೃತಪಟ್ಟ ಕರಿಗಿರಿ ಯಾಚಾರ್ಯರ ಜಿಂದಗಿ ಬಗ್ಯಾಗಿ ಬರತಕ್ಕ 1,668—0—0 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರಿ ದರಖಾಸ್ತುದಾರರಾದ ಬೆಂಗಳೂರು ಬಸವನಾಪುರದಲ್ಲಿರುವ ನಿಜಗಲ್ ಕರಿಗಿರಿಯಾಚಾರ್ರ ಮಕ್ಕಳು 1ನೆ ನರಸಿಹ್ಮಾಚಾರ್, 2ನೆ ಆನಂದತೀರ್ಥ ಮೈನರ್, ಗಾರ್ಡಿಯರ್ ಚಿಕ್ಕಪ್ಪ ನರಶಿಂಗರಾವ್ ಯವರ ಅರ್ಜಿಯನ್ನು ಸ್ ಸ 1909ನೆ ಇಸವಿ ಡಿಸೆಂಬರು ತಿಂ ಗಳು ತಾರೀಖು 10ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಕರಿಗಿರಿಯಾಚಾರ್ಯರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿ ಯಪಡಿಸಿ ಇದೆ.

ಸ್ ಸ 1909ನೆ ಇಸವಿ ನವಂಬರು ತಿಂಗಳು 27ನೆ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಶಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

1909—10ನೆ ಇಸವಿ ಮಿ|| ನಂಬರ್ 329.

ಅರ್ಜಿದಾರರು ಆನೇಕಲ್ ಕಸಬಾದಲ್ಲಿರುವ ಮರಾಟಿ ನೀಲಕಂಠರಾವ್ ಮಗ ಶ್ಯಾಮರಾವ್ ಮೈನರ್ ಗಾರ್ಡಿಯರ್, ಚಿಕ್ಕಪ್ಪ ರಿಟೈ ರ್ಡ್ ಪೋಲೀಸ್ ಇನ್‌ಸ್ಪೆಕ್ಟರ್ ಎಂ. ಹನುಮಂತರಾವ್ ಬೆಂಗಳೂರು ಸಿವಲ್ ಅಂಡ್ ಮಿಲಟೇರಿ ಸ್ಪೇಷ್ ಕರತುರಪಿನಲ್ಲಿರುತ್ತಾರೆ. ಮೈ ನರಾದ ಶ್ಯಾಮರಾವ್ ಆನೇಕಲ್ ಸ್ಥಳದ ನೀಲಕಂಠರಾವ್ ಆಸ್ತೀ ವಿಷಯದಲ್ಲಿ—

ಸದರಿ ಮೈನರಾದ ಶಾಮರಾವ್‌ಗೆ ಮುಖ್ಯ ವಾರಸ್‌ದಾರಾಗಬೇಕೆಂಬ ಹಕ್ಕಿನಮೇಲೆ ಬೆಂಗಳೂರು ಸ್ಥಳದ ಎಂ. ಹನುಮಂತ ರಾವ್ ಎಂಬುವರು ಸದರೀ ಮೈನರ್ ಶ್ಯಾಮರಾವ್ ಆಸ್ತಿ ಕಾಪಾಡುವದಕ್ಕೆ ಸರ್ಟಿಫಿಕೇಟ್ ಬಗ್ಯೆ ಅರ್ಜಿ ಕೊಟ್ಟು ಇರುತ್ತಾರೆ. ಸದರೀ ಅರ್ಜಿ ಹಿಯರಿಂಗ್ ಬಗ್ಯೆ ಸ್ ಸ 1909ನೆ ಇಸವಿ ಡಿಸೆಂಬರ್ 17ನೆ ತಾರೀಖಿನಲ್ಲಿ ಮೊಕರರು ಮಾಡಿ ಇರುವದಾಗಿ ಇದರಿಂದ ನೋಟೀಸ್ ಕೊಡೋಣಾಗಿದೆ.

ಸ್ ಸ 1909ನೆ ಇಸವಿ ನವಂಬರ್ 29ನೆ ತಾರೀಖಿನಲ್ಲಿ ಕೋರ್ಟು ಮೊಹರ್ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಬಿ. ನಾಗಪ್ಪ, ಸಬ್ ಜಡ್ಜ್.

ಮೈಸೂರು ಗವರ್ನಮೆಂಟ್ ಕೋ ಆಪರೇಟಿವ್ ಸೊಸೈಟಿಗಳ ರಿಜಿಸ್ಟ್ರಾರ್‌ರವರ ಆಫೀಸ್.

ನೋಟಿಫಿಕೇಷ್ ನಂಬರ್ 655—C. S. 24; ಬೊಕ್ಕಾಂ ಬೆಂಗಳೂರು.

ತಾರೀಖು 29-30ನೆ ನವಂಬರಿ 1909.

ಈ ಕೆಳಗೆ ನಮೂದಿಸಿರುವ ಕೋ ಆಪರೇಟಿವ್ ಸೊಸೈಟಿಗಳು, 1905ನೆ ಇಸವಿಯ ಮೈಸೂರು ಕೋ ಆಪರೇಟಿವ್ ಸೊ ಸೈಟಿಗಳ ರೆಗ್ಯುಲೇಷ್ 6ನೆ ಸೆಕ್ಷ್ 2ನೆ ಬಳಿ ಪ್ರಕರಣಕ್ಕನುಸಾರವಾಗಿ ರಿಜಿಸ್ಟರು ಮಾಡಲ್ಪಟ್ಟಿರುತ್ತವೆ :—

ಹೆಸರು	ಸ್ಥಳ.	ರಿಜಿಸ್ಟರು ಆದ ತಾರೀಖು.
(1) ತಿಪಟೂರು ಕೋ ಆಪರೇಟಿವ್ ಸೊಸೈಟಿ, ಲಿಮಿಟೆಡ್.	ತಿಪಟೂರು, ತುಮಕೂರು ಡಿಸ್ಟ್ರಿಕ್ಟು...	15ನೆ ನವಂಬರು 1909.
(2) ನೊಣವಿನಕೆರೆ ಕೋ ಆಪರೇಟಿವ್ ಸೊಸೈಟಿ, ಲಿಮಿಟೆಡ್.	ನೊಣವಿನಕೆರೆ, ತಿಪಟೂರು ತಾಲ್ಲೂಕು	ಡಿಟೋ
(3) ಪಾವಗಡ ಕೋ ಆಪರೇಟಿವ್ ಸೊಸೈಟಿ, ಲಿಮಿಟೆಡ್.	ಪಾವಗಡ, ತುಮಕೂರು ಡಿಸ್ಟ್ರಿಕ್ಟು ...	ಡಿಟೋ
(4) ಯಲಹಂಕ ಕೋ ಆಪರೇಟಿವ್ ಸೊಸೈಟಿ, ಲಿಮಿಟೆಡ್.	ಯಲಹಂಕ, ಬೆಂಗಳೂರು ತಾಲ್ಲೂಕು...	ಡಿಟೋ

—ಎಂ. ಶ್ಯಾಮರಾವ್, ಕೋ ಆಪರೇಟಿವ್ ಸೊಸೈಟಿಗಳ ರಿಜಿಸ್ಟ್ರಾರ್.